# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3.

ಸಂಖ್ಯೆ:ಎ8/ಎಸ್.ಎಸ್.ಎಲ್.ಸಿ.ಅಧಿಸೂಚನೆ/ಏಪ್ರಿಲ್-2020/24/2019-20 ದಿನಾಂಕ: 16.10.2019

## :: ಸುತ್ತೋಲೆ ::

ವಿಷಯ:- ಮಾರ್ಚ್/ಏಪ್ರಿಲ್ ಮಾಹೆಯಲ್ಲಿ ನಡೆಯಲಿರುವ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಖಾಸಗಿ ಅಭ್ಯರ್ಥಿಗಳ ನೋಂದಣಿ ಕುರಿತು.

ಉಲ್ಲೇಖ:- 1.ಸರ್ಕಾರದ ಆದೇಶ ಸಂಖ್ಯೆ:ಇಡಿ 355 ಎಸ್‌ಎಲ್‌ಬಿ 2017 ದಿನಾಂಕ:16.09.2019
2.ಮಂಡಳಿ ಅಧಿಸೂಚನೆ ಸಂಖ್ಯೆ ಎ8/ಎಸ್‌ಎಸ್‌ಎಲ್‌ಸಿ.ಅಧಿಸೂಚನೆ/ಏಪ್ರಿಲ್-2020/24/2019-20 ದಿ:30.08.2019.
3.ಮಂಡಳಿ ಸುತ್ತೋಲೆ ಸಂಖ್ಯೆ:ಎ8/ಎಸ್‌ಎಸ್‌ಎಲ್‌ಸಿ.ಅಧಿಸೂಚನೆ/ಏಪ್ರಿಲ್-2020/24/2019-20 ದಿ:23.09.2019

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾರ್ಚ್/ಏಪ್ರಿಲ್ 2020ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಳ್ಳಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ. ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಳ್ಳಲು ಈ ಹಿಂದೆ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರ ಕಛೇರಿಯಲ್ಲಿ ನೋಂದಣಿ ಶುಲ್ಕವನ್ನು ನೆಫ್ಟ್‌ಚಲನ್ ಮುಖಾಂತರ ಪಾವತಿಸಿ ನೋಂದಾಯಿಸಿಕೊಳ್ಳಬೇಕಾಗಿತ್ತು. ಸರ್ಕಾರದ ಆದೇಶ ಸಂಖ್ಯೆ:ಇಡಿ 355 ಎಸ್‌ಎಲ್‌ಬಿ 2017 ದಿನಾಂಕ:16.09.2019ರಂತೆ ಪ್ರಸ್ತುತ ಸಾಲಿನಿಂದ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಳ್ಳಲು ಅಭ್ಯರ್ಥಿಯು ವಾಸಿಸುತ್ತಿರುವ ಪಟ್ಟಣ / ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಅಥವಾ ಮಾನ್ಯತೆ ಪಡೆದ ಖಾಸಗಿ ಶಾಲೆಗಳ ಮುಖಾಂತರವೇ ನಿಯಮಾನುಸಾರ ನೋಂದಣಿಗಾಗಿ ಅರ್ಜಿ ಸಲ್ಲಿಸಿ ಪರೀಕ್ಷೆ ತೆಗೆದುಕೊಳ್ಳಬಹುದಾಗಿರುತ್ತದೆ. ಖಾಸಗಿ ಅಭ್ಯರ್ಥಿಗಳ ನೋಂದಣಿಯನ್ನು ಶಾಲಾ ಮುಖ್ಯೋಪಾಧ್ಯಾಯರ ಹಂತದಲ್ಲಿಯೇ ನಿರ್ವಹಿಸಬೇಕಾಗಿದ್ದು, ಈ ಪ್ರಕ್ರಿಯೆಗಳ ಬಗ್ಗೆ ಉಲ್ಲೇಖಿತ-3ರ ಸುತ್ತೋಲೆಯಲ್ಲಿ ವಿವರವಾಗಿ ತಿಳಿಸಲಾಗಿರುತ್ತದೆ.

ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಳ್ಳಲು ಕೊನೆಯ ದಿನಾಂಕ:21.10.2019 ಅಗಿರುತ್ತದೆ. ಆದರೆ ಕಳೆದ ಸಾಲಿಗಿಂತ ಪ್ರಸ್ತುತ ಸಾಲಿಗೆ ಖಾಸಗಿ ಅಭ್ಯರ್ಥಿಗಳ ನೋಂದಾವಣಿ ಸಂಖ್ಯೆ ತುಂಬಾ ಕಡಿಮೆ ಇರುತ್ತದೆ. ಈ ಸಂಬಂಧ ಈ ದಿನಾಂಕದವರೆಗೆ ಖಾಸಗಿ ಅಭ್ಯರ್ಥಿಗಳ ನೋಂದಣಿ ಬಗ್ಗೆ ರಾಜ್ಯದ ಎಲ್ಲಾ ಉಪ ನಿರ್ದೇಶಕರು (ಆಡಳಿತ) / ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವ ಜಿಲ್ಲೆ/ತಾಲ್ಲೂಕಿನ ಸ್ಥಳೀಯ ದಿನಪತ್ರಿಕೆ ಹಾಗೂ ಇತರೆ ಮಾಧ್ಯಮಗಳ ಮೂಲಕ ಸದರಿ ವಿಷಯದ ಬಗ್ಗೆ ಶಾಲಾ ಮುಖ್ಯೋಪಾಧ್ಯಾಯರು/ಪೋಷಕರು/ವಿದ್ಯಾರ್ಥಿಗಳ ಗಮನಕ್ಕೆ ಬರುವಂತೆ ವ್ಯಾಪಕ ಪ್ರಚಾರ ಮಾಡಿ ಖಾಸಗಿ ಅಭ್ಯರ್ಥಿಯಾಗಿ ಎಸ್.ಎಸ್.ಎಲ್.ಸಿ ಪರೀಕ್ಷೆ ತೆಗೆದುಕೊಳ್ಳಬಯಸುವ ಅಭ್ಯರ್ಥಿಗಳು ಇದರ ಸದುಪಯೋಗವನ್ನು ಪಡೆದುಕೊಳ್ಳುವಂತೆ ಅಗತ್ಯ ಕ್ರಮ ಕೈಗೊಳ್ಳುವುದು.

ಈ ದಿನಾಂಕದವರೆಗೆ ಜಿಲ್ಲಾವಾರು ಅಭ್ಯರ್ಥಿವಾರು ನೋಂದಣಿಯಾಗಿರುವ ಒಟ್ಟು ವಿದ್ಯಾರ್ಥಿಗಳ ಪಟ್ಟಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ. ಇದನ್ನು ಪರಿಶೀಲಿಸಿಕೊಂಡು ನಿಮ್ಮ ಜಿಲ್ಲೆಗಳ ಶಾಲಾ ಮುಖ್ಯ ಶಿಕ್ಷಕರುಗಳಿಗೆ ವಿದ್ಯಾರ್ಥಿಗಳ ವಿವರಗಳನ್ನು ಆನ್‌ಲೈನ್‌ನಲ್ಲಿ ನೋಂದಣಿ ಕಾರ್ಯವನ್ನು ಅತೀ ಶೀಘ್ರದಲ್ಲಿ ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ತಿಳಿಸುವುದು.

**ಖಾಸಗಿ ಅಭ್ಯರ್ಥಿಯಾಗಿ ನೋಂದಣಿಗೆ ಕೆಲವು ಅಭ್ಯರ್ಥಿಗಳು ಈಗಾಗಲೇ ರೂ.185/-ಗಳ ಶುಲ್ಕವನ್ನು ಬ್ಯಾಂಕ್‌ಗೆ ನೆಫ್ಟ್ ಚಲನ್ ಮುಖಾಂತರ ಪಾವತಿಸಿ ನೋಂದಾಯಿಸಿಕೊಂಡಿರುವ (ಉಪನಿರ್ದೇಶಕರ ಕಛೇರಿಯಲ್ಲಿ) ಪ್ರಕರಣಗಳು ತಿಳಿದುಬಂದಿರುತ್ತದೆ. ಆನ್‌ಲೈನ್‌ನಲ್ಲಿ ಅಭ್ಯರ್ಥಿಗಳ ವಿವರಗಳನ್ನು ಅಪ್‌ಲೋಡ್ ಮಾಡಲು ದಿನಾಂಕ:25.10.2019ರವರೆಗೆ ಸಮಯ ನಿಗಧಿಪಡಿಸಲಾಗಿದ್ದು, ಈ ದಿನಾಂಕದ ನಂತರ ಶುಲ್ಕ ಪಾವತಿಸಲು (ಎಲ್ಲಾ ವಿದ್ಯಾರ್ಥಿಗಳನ್ನು ಒಳಗೊಂಡ) ಚಲನ್‌ನನ್ನು ಮಂಡಳಿ ಜಾಲತಾಣದಲ್ಲಿಯೇ ಜನರೇಟ್ ಮಾಡಲಾಗುವುದು. ಸದರಿ ಚಲನ್‌ನನ್ನು ಡೌನ್‌ಲೋಡ್ ಮಾಡಿಕೊಂಡು ಈಗಾಗಲೇ ಖಾಸಗಿ ಅಭ್ಯರ್ಥಿಗಳ ನೋಂದಣಿಗೆ ರೂ.185/-ಗಳ ಚಲನ್ ಮುಖಾಂತರ ಪಾವತಿಸಿದಲ್ಲಿ, ಅಂತಹ ಶಾಲೆಯವರು ಮಂಡಳಿಯಿಂದ ಡೌನ್‌ಲೋಡ್ ಮಾಡಿಕೊಂಡ ಚಲನ್‌ನಲ್ಲಿ ಈಗಾಗಲೇ ಪಾವತಿಸಿರುವ (ಖಾಸಗಿ ಅಭ್ಯರ್ಥಿಗಳ) ಮೊತ್ತವನ್ನು ಕಳೆದು ಉಳಿಕೆ ಮೊತ್ತಕ್ಕೆ ನೆಫ್ಟ್ ಚಲನ್‌ನಲ್ಲಿ ವಿವರವಾಗಿ ಭರ್ತಿಮಾಡಿ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಪಾವತಿಸುವುದು.**

**ಈ ರೀತಿ ಶುಲ್ಕ ಪಾವತಿಸಿದ ಮೂಲ ಚಲನ್ ಮತ್ತು ಮಂಡಳಿಯ ಜಾಲತಾಣದಲ್ಲಿ ಡೌನ್‌ಲೋಡ್ ಮಾಡಿಕೊಂಡ ಚಲನ್ ಎರಡನ್ನೂ ಸ್ಪಷ್ಟ ವಿವರಣೆಯೊಂದಿಗೆ ಸಂಬಂಧಿಸಿದ ಪರಿಶೀಲನಾ ಶಾಖೆಗೆ ಕಡ್ಡಾಯವಾಗಿ ಕಳುಹಿಸಲು ತಿಳಿಸಿದೆ. ಈ ಬಗ್ಗೆ ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಲೆಗಳ ಮುಖ್ಯೋಪಾಧ್ಯಾಯರ ಗಮನಕ್ಕೆ ಬರುವಂತೆ ಕೂಡಲೇ ಕ್ರಮವಹಿಸುವುದು.**

(ವಿ.ಸುಮಂಗಲ)
~~ನಿರ್ದೇಶಕರು, ಪರೀಕ್ಷೆಗಳು~~ 16/10/19

ಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) & ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆರವರಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಸರ್ಕಾರಿ/ಮಾನ್ಯತೆ ಪಡೆದ ಅನುದಾನಿತ ಮತ್ತು ಅನುದಾನರಹಿತ ಪ್ರೌಢ ಶಾಲಾ ಮುಖ್ಯೋಪಾಧ್ಯಾಯರಿಗೆ (ಸಂಬಂಧಿಸಿದ ಉಪನಿರ್ದೇಶಕರ ಮುಖಾಂತರ) ಸೂಕ್ತ ಕ್ರಮಕ್ಕಾಗಿ. 3. ಕಛೇರಿ ಪ್ರತಿ.

A8_letter1

| SSLC APRIL 2020 EXAMINATION REGISTRATION STATUS AS ON 16-10-2019 @ 10.30 A.M | | | | | | | | | |
|---|---|---|---|---|---|---|---|---|---|
| Sl. No. | District Code | District Name | CCERF | CCEPF | CCERR | CCEPR | NSR | NSPR | TOTAL |
| 1 | AN | BENGALURU NORTH | 13031 | 81 | 439 | 58 | 2 | 0 | **13611** |
| 2 | AS | BENGALURU SOUTH | 16883 | 182 | 1065 | 92 | 4 | 1 | **18227** |
| 3 | BA | RAMNAGARA | 5637 | 42 | 32 | 31 | 8 | 0 | **5750** |
| 4 | BB | BENGALURU RURAL | 4260 | 9 | 26 | 11 | 1 | 0 | **4307** |
| 5 | CA | CHIKKABALLAPUR | 5106 | 20 | 163 | 30 | 0 | 0 | **5319** |
| 6 | CC | KOLAR | 7675 | 25 | 104 | 45 | 2 | 1 | **7852** |
| 7 | DA | MADHUGIRI | 5898 | 32 | 105 | 13 | 3 | 0 | **6051** |
| 8 | DD | TUMAKURU | 11106 | 35 | 203 | 19 | 4 | 0 | **11367** |
| 9 | EA | CHAMARAJANAGAR | 5002 | 33 | 112 | 31 | 1 | 0 | **5179** |
| 10 | EE | MYSURU | 11088 | 92 | 189 | 29 | 4 | 0 | **11402** |
| 11 | FF | MANDYA | 8300 | 28 | 118 | 14 | 4 | 0 | **8464** |
| 12 | GA | UDUPI | 6140 | 125 | 67 | 20 | 0 | 0 | **6352** |
| 13 | GG | MANGALURU | 12609 | 349 | 212 | 107 | 0 | 0 | **13277** |
| 14 | HH | KODAGU | 2363 | 25 | 72 | 2 | 0 | 0 | **2462** |
| 15 | IA | DAVANAGERE | 11489 | 80 | 115 | 14 | 2 | 0 | **11700** |
| 16 | II | CHITRADURGA | 9756 | 43 | 92 | 13 | 1 | 0 | **9905** |
| 17 | JJ | CHIKKAMAGALURU | 5422 | 76 | 119 | 43 | 1 | 1 | **5662** |
| 18 | KK | SHIVAMOGGA | 9549 | 79 | 385 | 35 | 0 | 0 | **10048** |
| 19 | LL | HASSAN | 12166 | 45 | 113 | 31 | 3 | 0 | **12358** |
| 20 | MA | HAVERI | 10188 | 68 | 213 | 27 | 2 | 0 | **10498** |
| 21 | MB | GADAG | 5757 | 55 | 176 | 30 | 0 | 0 | **6018** |
| 22 | MM | DHARWAD | 10518 | 110 | 234 | 53 | 1 | 0 | **10916** |
| 23 | NA | CHIKODI | 21054 | 40 | 186 | 23 | 0 | 0 | **21303** |
| 24 | NN | BELAGAVI | 13985 | 19 | 315 | 18 | 1 | 0 | **14338** |
| 25 | OA | BAGALKOTE | 12409 | 54 | 650 | 46 | 0 | 0 | **13159** |
| 26 | OO | VIJAYAPURA | 15705 | 285 | 485 | 72 | 0 | 0 | **16547** |
| 27 | PA | SIRSI | 6060 | 16 | 72 | 6 | 0 | 0 | **6154** |
| 28 | PP | UTTARA KANNADA | 3645 | 25 | 28 | 13 | 1 | 0 | **3712** |
| 29 | QA | YADGIR | 5928 | 112 | 1137 | 68 | 1 | 0 | **7246** |
| 30 | QQ | KALABURAGI | 14171 | 258 | 478 | 169 | 2 | 0 | **15078** |
| 31 | RA | KOPPAL | 10135 | 146 | 367 | 144 | 0 | 0 | **10792** |
| 32 | RR | RAICHUR | 12028 | 275 | 893 | 164 | 0 | 1 | **13361** |
| 33 | SS | BIDAR | 6590 | 144 | 261 | 65 | 1 | 0 | **7061** |
| 34 | TT | BALLARI | 15919 | 206 | 720 | 265 | 0 | 0 | **17110** |
| | | **TOTAL** | **327572** | **3214** | **9946** | **1801** | **49** | **4** | **342586** |
| | | | | | | | | | |